ಸಮಿತಿ ಅನೇಕ ಶಿಫಾರಸ್ಸುಗಳನ್ನು ಏನು ಮಾಡಿತ್ತು, ಇವತ್ತು ಅವರೇ ಮುಖ್ಯಮಂತ್ರಿಗಳೂ ವಿತ್ತ ಮಂತ್ರಿಗಳೂ ಆಗಿರುವುದರಿಂದ ಅವರು ಮಾಡಿದಂತಹ ಅನೇಕ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಿದ್ದಾರೆ. ಮತ್ತು ಇನ್ನೂ ಕಾರ್ಯಗತ ಆಗದಿರುವುದನ್ನು ಸರ್ಕಾರದವರು ಪರಿಶೀಲಿಸಿ ಮಂತ್ರಿಮಂಡಲದ ಗಮನಕ್ಕೂ ತರುವ ಬಗ್ಗೆ ನಾವು ಬಹಳ ಕಾತುರರಾಗಿದ್ದೇವೆ. ರೈತರ ಬಗ್ಗೆ ಏನೇನು ಸವಲತ್ತುಗಳನ್ನು ಕೊಡಬೇಕೋ ಅದನ್ನು ಕೊಡುತ್ತೇವೆ. ಇವತ್ತು 10 ಹೆಚ್.ಪಿ. ಗೆ ವಿದ್ಯುಚ್ಛಕ್ತಿಯನ್ನು ಪುಕ್ಕಟೆಯಾಗಿ ಒದಗಿಸಬೇಕೆಂಬ ಒಂದು ದಿಟ್ಟ ನಿರ್ಣಯ ತೆಗೆದುಕೊಂಡಿದ್ದೇವೆ. ಇಡೀ ಕರ್ನಾಟಕದಲ್ಲಿ ಅದನ್ನು ಸ್ವಾಗತಿಸುತ್ತಿದ್ದಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಕರೆಂಟ್ ಇಲ್ಲ, ಪಂಪುಸೆಟ್ಟುಗಳು ವರ್ಕ್ ಆಗುತ್ತಾ ಇಲ್ಲ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ : ರೈತರಿಗೆ ಬಹಳಷ್ಟು ಅನುಕೂಲಗಳನ್ನು ಮಾಡುತ್ತಿದ್ದೇವೆ. ಬಜೆಟ್ ಬುಕ್ ಓದಿದರೆ ನಿಮಗೆ ಗೊತ್ತಾಗುತ್ತದೆ. "ಕೆರೆ ಕಲ್ಯಾಣ", "ಹನಿ ತೆನೆ" ಇವೆಲ್ಲಾ ರೈತರಿಗೆ ಬಹಳ ಅನುಕೂಲವಾಗುವಂಥ ಕಾರ್ಯಕ್ರಮಗಳು. ಮಾನ್ಯ ಮುಖ್ಯಮಂತ್ರಿಗಳು, ಉತ್ತರ ಕೊಡುತ್ತಾರೆ. ಬಜೆಟ್‌ನಲ್ಲೂ ಒದಗಿಸಿದ್ದಾರೆ. ಆದ್ದರಿಂದ ಇದಕ್ಕಿಂತಲೂ ಹೆಚ್ಚಾಗಿ ಏನಾದರೂ ಕೊಡಬೇಕು ಅಂದರೆ ನಮ್ಮ ಈ ಸದನದ ಅಭಿಪ್ರಾಯವನ್ನು ನಮ್ಮ ಮಂತ್ರಿಮಂಡಲದಲ್ಲಿ ಚರ್ಚಿಸಿ, ಮತ್ತು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನು ಹೆಚ್ಚಿನ ಅನುಕೂಲವನ್ನು ರೈತರಿಗೆ ಮಾಡಿಕೊಡುವುದರಲ್ಲಿ ನಾವು ಒಂದು ಸ್ವಲ್ಪವೂ ಹೆದರದೆ ಮಾಡುತ್ತೇವೆ ಎಂದು ನಾನು ಈ ಸದನಕ್ಕೆ ತಿಳಿಸುತ್ತೇನೆ.

ಉಪಾಧ್ಯಕ್ಷೆಣಿಯವರು : ಶ್ರೀಯುತ ಪೆರಿಕಲ್ ಎಂ. ಮಲ್ಲಪ್ಪನವರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ತರಕಾರಿಗಳಿಗೆ ಸರಿಯಾದ ಬೆಲೆಯನ್ನು ನಿಗದಿಪಡಿಸುವುದು.

259 (1238) ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ರೈತರು ಬೆಳೆದ ತರಕಾರಿಗಳಿಗೆ ಬೆಂಗಳೂರು ನಗರದಲ್ಲಿ ಸರಿಯಾದ ಬೆಲೆಗಳು ದೊರೆಯದೆ ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರೈತರಿಗೆ ಒಳ್ಳೆ ಬೆಲೆ ಸಿಗುವಂತೆ ಮಾಡಲು ಸರ್ಕಾರದವರ ಮುಂದೆ ಯೋಜನೆ ಏನಾದರೂ ಇದೆಯೆ?

ಇ) ಅಂತಹ ಯೋಜನೆಯ ವಿವರಗಳೇನು?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರೈತರು ಬೆಳೆದ ತರಕಾರಿಗಳಿಗೆ ಬೆಂಗಳೂರು ನಗರದಲ್ಲಿನ ಮುಕ್ತ ಮಾರುಕಟ್ಟೆ ಮತ್ತು ಹಾಪ್‌ಕಾಮ್ಸ್‌ನಲ್ಲಿ ಸರಿಯಾದ ಬೆಲೆಗಳು ದೊರೆಯುತ್ತಿವೆ. ಆದರೂ ಸ್ವಲ್ಪ ಮಟ್ಟಿಗೆ ರೈತರು ಹೊರ ರಾಜ್ಯಗಳಿಗೂ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈಗ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಮೂಲಕ ಹಾಪ್‌ಕಾಮ್ಸ್ ಸಂಘದ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೊಳಿಸಿ ರೈತರಿಂದ ಹೆಚ್ಚು ಹೆಚ್ಚು ತರಕಾರಿಗಳನ್ನು ಕೊಳ್ಳಲು ಏರ್ಪಾಡು ಮಾಡುವ ಯೋಜನೆ ಇದೆ.

ಇ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ 4ನೇ ಪ್ರಾಜೆಕ್ಟ್‌ಗೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಮಂಡಳಿಯ ಅನುಮತಿ ನಿರೀಕ್ಷಿಸಲಾಗಿದೆ. ಸದರಿ ಯೋಜನೆಯಡಿ 65 ಸಂಗ್ರಹಣಾ ಕೇಂದ್ರಗಳನ್ನು, 13 ಕೇಂದ್ರ ಉಗ್ರಾಣಗಳನ್ನು 130 ಮಾರಾಟ ಮಳಿಗೆಗಳನ್ನು ತೆರೆಯಲು ಹಾಗೂ 42 ಸಾಗಾಣಿಕೆ ವಾಹನಗಳನ್ನು ಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಒಟ್ಟು ಅಂದಾಜು ವೆಚ್ಚ 1241.906 ಲಕ್ಷ ರೂ.ಗಳು.

ಶ್ರೀ ಎಂ.ವಿ. ವೆಂಕಟಪ್ಪ : ಸಭಾಧ್ಯಕ್ಷಣಿಯವರೆ, ಮಂತ್ರಿಗಳು ಉತ್ತರದಲ್ಲಿ 12 ಕೋಟಿ 41 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ವೇರಿಯಸ್ ಪ್ರೋಗ್ರಾಂಸ್‌ಗೆ ಅಂದರೆ 65 ಪ್ರಕ್ಯೂರ್‌ಮೆಂಟ್ ಸೆಂಟರ್ಸ್ ಮುಂತಾದುವನ್ನೆಲ್ಲಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ ಪ್ರೆಕ್ಯೂರ್‌ಮೆಂಟ್ ಸೆಂಟರ್ಸ್, ಮತ್ತು ಸೆಂಟ್ರಲ್ ಗೋಡೌನ್ಸ್, ರೀಟೇಲ್ ಔಟ್‌ಲೆಟ್ಸ್ ಕಟ್ಟಿಸುವುದು, ಯಾವ ಯಾವ ಜಿಲ್ಲೆಗಳ ವ್ಯಾಪ್ತಿಗೆ ಬರುತ್ತವೆ?

ಶ್ರೀ ಎಂ.ಎನ್. ಆತ್ಮಾನಂದ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಈ ಯೋಜನೆ ಎನ್.ಸಿ.ಡಿ.ಸಿ. ಯ 4ನೇ ಪ್ರಾಜೆಕ್ಟ್‌ಗೆ ಸೇರತಕ್ಕದ್ದು. ಪ್ರಸ್ತುತ ನಾವು ಇರತಕ್ಕಂಥದ್ದು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ 3ನೇ ಪ್ರಾಜೆಕ್ಟ್‌ನಲ್ಲಿ, ಈಗ 6 ಜಿಲ್ಲೆಗಳಿಗೆ ಈ ಒಂದು ಪ್ರಾಜೆಕ್ಟ್ ಸೀಮಿತವಾಗಿದೆ. ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ದಕ್ಷಿಣ ಕನ್ನಡ ಮತ್ತು ಮೈಸೂರು. ಇನ್ನು ಉಳಿದ 13 ಜಿಲ್ಲೆಗಳಿಗೆ ಈ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ 4ನೇ ಪ್ರಾಜೆಕ್ಟ್‌ನಲ್ಲಿ 12.41 ಕೋಟಿ ರೂಪಾಯಿಗಳ ಒಂದು ವೆಚ್ಚದಲ್ಲಿ ಇದನ್ನು ವಿಸ್ತರಿಸಲಾಗುತ್ತದೆ. ನಮ್ಮ ಸರ್ಕಾರ ಇದಕ್ಕೆ ತಾತ್ವಿಕವಾಗಿ ಅನುಮೋದನೆಯನ್ನು ನೀಡಿದ್ದು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಒಂದು ಒಪ್ಪಿಗೆಯನ್ನು ನಾವು ನಿರೀಕ್ಷಿಸುತ್ತಾ ಇದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ಕೋಲಾರ ಜಿಲ್ಲೆಯಲ್ಲಿ ಕಾವೇರಿ ನದಿಯಾಗಲಿ, ತುಂಗಭದ್ರ ನದಿಯಾಗಲಿ ಇಲ್ಲ. ನಿಮ್ಮ ಜಿಲ್ಲೆಯಲ್ಲಾದರೂ ಕಾವೇರಿ ನದಿ ಇದೆ, ವಿಶ್ವೇಶ್ವರಯ್ಯ ನಾಲೆ ಇದೆ. ನಮಗೆ ಇರುವುದೇ ಮಿಲ್ಕ್, ಸಿಲ್ಕು, ವೆಜಿಟೇಬಲ್ಸ್. ಈ ಮೂರು ಬೆಂಗಳೂರಿಗೆ ಬಂದರೆ ನೀವೆಲ್ಲ ಉಳಿಯುತ್ತೀರಿ. ಇಲ್ಲದಿದ್ದರೆ ನೀವೆಲ್ಲಾ ಉಳಿಯುವುದಿಲ್ಲ. ಸಿಲ್ಕು ಬರಬೇಕು, ಮಿಲ್ಕ್ ಬರಬೇಕು, ವೆಜಿಟೇಬಲ್ಸ್ ಬರಬೇಕು. ಜೊತೆಗೆ ನಮ್ಮ ಜಿಲ್ಲೆಯಲ್ಲಿ ಸುಮಾರು 25 ಕೋಟಿ ರೂಪಾಯಿ ಬೆಲೆ ಆಗುವಷ್ಟು ವೆಜಿಟೇಬಲ್ಸ್, ಬೆಳೆಯುತ್ತಾರೆ. ಆದರಲ್ಲಿ ನಮ್ಮ ತಾಲ್ಲೂಕಿನಲ್ಲಿ ಸುಮಾರು 5 ಕೋಟಿಯಷ್ಟು ಅಂದರೆ, ಐದನೇ ಒಂದು ಭಾಗದಷ್ಟು ಬೆಳೆಯುತ್ತಾರೆ. ಇಲ್ಲಿ ಬೆಂಗಳೂರಿನಲ್ಲಿ ಅದಕ್ಕೆ ಸರಿಯಾದ ಬೆಲೆ ಸಿಕ್ಕದೆ ಟೋಮಾಟೊ ಮುಂತಾದವು ವಿಜಯವಾಡ, ಕಲ್ಕತ್ತ, ಮದರಾಸು ನಗರಗಳಿಗೆ ಹೋಗುತ್ತಾ ಇದೆ. ಇಲ್ಲಿ ನಮಗೆ ಹೆಚ್ಚಾಗಿ ಬೆಲೆ ಕೊಡುವುದಕ್ಕೆ ನೀವು ಇನ್ನು ಹೆಚ್ಚು ಹೆಚ್ಚಾಗಿ ಸೆಂಟರ್ಸ್ ಮಾಡಬೇಕು. ಒಂದು ವೇಳೆ ಈ ಪ್ರಾಜೆಕ್ಟ್ ಸ್ಯಾಂಕ್ಷನ್ ಆಗದೇ ಇದ್ದರೆ ಏನು ಮಾಡುತ್ತೀರಿ? ಎನ್.ಸಿ.ಡಿ.ಸಿ. ಪ್ರಾಜೆಕ್ಟ್ ನಮಗೆ ಬರಲಿಲ್ಲ ಎಂದು ಇಟ್ಟುಕೊಳ್ಳೋಣ. ಆಗ ನಮ್ಮ ರಾಜ್ಯ ಸರ್ಕಾರದವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ.

ಶ್ರೀ ಎಂ.ಎಸ್. ಆತ್ಮಾನಂದ : ಲಾಲ್‌ಬಾಗ್‌ನಲ್ಲಿರತಕ್ಕ ತೋಟದ ಬೆಳೆಗಾರರ ಸಹಕಾರ ಸಂಘದ ಶಕ್ತಿ ಎಂದರೆ ಪ್ರತಿದಿನ ಸುಮಾರು 100 ಟನ್‌ನಷ್ಟು ತರಕಾರಿಯನ್ನು ತೆಗೆದುಕೊಳ್ಳುವಂತಹ ವಹಿವಾಟನ್ನು ನಡೆಸುತ್ತಿದೆ. 3ನೇ ಯೋಜನೆಯ ವ್ಯಾಪ್ತಿಯಲ್ಲಿ ಕೋಲಾರ ಜಿಲ್ಲೆ ಬಂದಿರುವುದರಿಂದ ಅಲ್ಲಿ 8 ವಿತರಣಾ ಮಳಿಗೆಗಳನ್ನು ಪ್ರಾರಂಭಮಾಡಿ ಅವು ಕೆಲಸ ಮಾಡುತ್ತಿವೆ. ತಾ. 9-3-92 ರಂದು ಸುಮಾರು 5 ವಿತರಣಾ ಮಳಿಗೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಇನ್ನೂ 7 ವಿತರಣಾ ಮಳಿಗೆಗಳನ್ನು ಹಾಗೂ 3 ಸಂಗ್ರಹಣಾ ಕೇಂದ್ರಗಳನ್ನು ಕೋಲಾರ ಜಿಲ್ಲೆಯಲ್ಲಿ ತೆರೆಯಬೇಕೆಂದು ಆಶಯವಿದೆ. ಈ ತರಕಾರಿಗೆ ಅವಶ್ಯವಿದ್ದ ಕಡೆಯಲ್ಲಿ ಸಂಗ್ರಹಣಾ ಕೇಂದ್ರ ಅಥವಾ ವಿತರಣಾ ಮಳಿಗೆಗಳನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆಯನ್ನು ಕೊಟ್ಟರೆ ಅದನ್ನು ಪರಿಶೀಲಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಈಗಾಗಲೆ ಮಾನ್ಯ ಮಂತ್ರಿಗಳು ತಿಳಿಸಿರುವಂತೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಿಂದ 4ನೇ ಹಂತದ ಪ್ರಾಜೆಕ್ಟ್‌ನ್ನು ಮಂಜೂರು ಮಾಡಿದ್ದೇವೆಂದು ತಿಳಿದುಬಂದಿದೆ. ಆದರೆ 3ನೇ ಹಂತದ ಪ್ರಾಜೆಕ್ಟ್ ಯಾವಾಗ ಮುಗಿಯುತ್ತದೆ ಎಂದು ತಿಳಿಸಿಲ್ಲ. ಈಗಾಗಲೇ ಆಯ್ಕೆಯಾಗಿರತಕ್ಕ ಸಂಗ್ರಹಣಾ ಕೇಂದ್ರ ಮತ್ತು ವಿತರಣಾ ಕೇಂದ್ರಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಚಿಕ್ಕಬಳ್ಳಾಪುರ ತಾಲ್ಲೂಕು ಅಲೂಗಡ್ಡೆ, ಈರುಳ್ಳಿ ಮತ್ತು ದ್ರಾಕ್ಷಿ ಬೆಳೆಗೆ ಬಹಳ ಹೆಸರುವಾಸಿಯಾಗಿದೆ. ಆದುದರಿಂದ ಈ ತಾಲ್ಲೂಕಿನಲ್ಲಿ ಸಂಗ್ರಹಣಾ ಕೇಂದ್ರಗಳನ್ನು ತೆರೆಯಲು ಸರ್ಕಾರ ಯೋಚಿಸುತ್ತದೆಯೆ?

ಶ್ರೀ ಎಂ.ಎಸ್ ಆತ್ಮಾನಂದ : ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ 3ನೇ ಹಂತದ ಯೋಜನೆ ಜೂನ್ 1992ಕ್ಕೆ ಮುಗಿಯಬೇಕಾಗಿದೆ. ಮಾನ್ಯ ಸದಸ್ಯರು ಏನು ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ, ಅದರ ಪ್ರಕಾರ ಅವರ ಊರಿನಲ್ಲಿ ಸಂಗ್ರಹಣಾ ಕೇಂದ್ರವನ್ನು ತೆರೆಯುವುದು ಅವಶ್ಯಕವಿದ್ದರೆ ಅದನ್ನು ಪರಿಶೀಲಿಸಿ ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ರಫಿ ಅಹ್ಮದ್ : ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತುಮಕೂರು, ಕೋಲಾರ, ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಕ್ಯೂರ್‌ಮೆಂಟ್ ಸೆಂಟರ್‌ಗಳನ್ನು ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಇದರ ಪ್ರಕಾರ ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ತಿಳಿಸಬೇಕು. ತುಮಕೂರಿನ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಒಂದು ಕೋಲ್ಡ್ ಸ್ಟೋರೇಜ್‌ನ್ನು ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಅಲ್ಲಿ ಈರುಳ್ಳಿ ಮತ್ತು ಪೊಟ್ಯಾಟೊ ಹೆಚ್ಚು ಬೆಳೆಯುತ್ತಿರುವುದರಿಂದ ಅಲ್ಲಿಗೆ ಕೋಲ್ಡ್ ಸ್ಟೋರೇಜ್‌ನ ಅವಶ್ಯಕತೆ ಬಹಳ ಇದೆಯೆಂದು ಹೇಳಬಯಸುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಸಂಗ್ರಹಣಾ ಕೇಂದ್ರವನ್ನು ತೆರೆಯತಕ್ಕ ಸಂದರ್ಭ ಯಾವುದರ ಮೇಲೆ ಅವಲಂಬಿಸುತ್ತದೆಂದರೆ ನಾವು ಕೊಂಡ ತರಕಾರಿಗಳಿಗೆ ಸೂಕ್ತ ಮಾರುಕಟ್ಟೆಯನ್ನು ಹುಡುಕಬೇಕಾದ ಒದಗಿಸಬೇಕಾದ ಅವಶ್ಯಕತೆ ಇರುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ತುಮಕೂರಿನಲ್ಲಿ ಈಗಾಗಲೇ ಈ ಯೋಜನೆಯನ್ನು, ಸೌಲಭ್ಯವನ್ನು ಹಂತಹಂತವಾಗಿ ವಿಸ್ತರಿಸಲು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಕೋಲಾರ ಜಿಲ್ಲೆಯಲ್ಲಿ ಟೊಮ್ಯಾಟೋ ಬಹಳ ಹೆಚ್ಚಿಗೆ ಬೆಳೆದು ಅದನ್ನು ಕೇಳುವವರಿಲ್ಲದೆ, ಕೊಂಡುಕೊಳ್ಳುವವರಿಲ್ಲದೆ ಅದನ್ನೆಲ್ಲಾ ಚರಂಡಿಗೆ ಸುರಿದು

ರೈತರು ಸರ್ವನಾಶವಾದರು ಎಂದು ಪತ್ರಿಕೆಗಳಲ್ಲಿ ನಾವೆಲ್ಲರೂ ಓದಿದ್ದೇವೆ. ಆ ರೀತಿ ಸರ್ವನಾಶ ಆದಂಥ ರೈತರಿಗೆ ಮಾರ್ಕೆಟ್ ವ್ಯವಸ್ಥೆಯನ್ನು ಏನು ಮಾಡಿದ್ದೀರೆಂಬುದನ್ನು ತಿಳಿಸಬೇಕು.

ಶ್ರೀ ಎಂ.ಎಸ್. ಆತ್ಮಾನಂದ : ಈಗಾಗಲೇ ನಾನು ಮಾನ್ಯ ಸಭೆಗೆ ತಿಳಿಸಿದ್ದೇನೆ. ನಮ್ಮ ಶಕ್ತಿ ಇರುವಷ್ಟು ವಹಿವಾಟನ್ನು ನಾವು ನಡೆಸುತ್ತಿದ್ದೇವೆ. ಬೆಂಗಳೂರಿನ ತೋಟದ ಬೆಳೆಗಾರರ ಸಹಕಾರ ಸಂಘದವರಾಗಲಿ ಅಥವಾ ಬೇರೆ ಜಿಲ್ಲೆಗಳಾಗಲಿ ಆದಷ್ಟೂ ರೈತರ ನೆರವಿಗೆ ನಾವು ಬರುತ್ತೇವೆಂದು ಹೇಳಬಯಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ದಾವಣಗೆರೆ ನಗರಕ್ಕೆ ತೃಪ್ತಿಕರ ಹಾಲು ಪೂರೈಕೆ

1010 (1656) ಶ್ರೀ ವೈ.ಎಸ್. ವೀರಣ್ಣ (ದಾವಣಗೆರೆ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ನಗರಕ್ಕೆ ತೃಪ್ತಿಕರ ಹಾಲು ಪೂರೈಕೆ ವ್ಯವಸ್ಥೆಗಾಗಿ ನಾಲ್ಕೂವರೆ ಕೋಟಿ ರೂ.ವೆಚ್ಚದ ರಾಷ್ಟ್ರೀಯ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ರವರ ನೆರವಿನ ಹಾಲಿನ ಡೈರಿ ಯೋಜನೆಯೊಂದನ್ನು ಹಿಂದಿನ ಸರಕಾರದ ಅವಧಿಯಲ್ಲಿ ಮಂಜೂರು ಮಾಡಲಾಗಿದ್ದು ಈ ಬಗ್ಗೆ ಏನು ಕ್ರಮ ಕೈಗೊಂಡಿಲ್ಲವೆಂದೂ ಹೇಳಲಾಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಪುನರ್ಚೇತನ ನೀಡುವ ಕ್ರಮ ಕೈಗೊಳ್ಳಲಾಗುವುದೇ ಹಾಗೂ ನಗರದ ನಾಗರೀಕರ ಹಿತದೃಷ್ಟಿಯಿಂದ ಸರಕಾರವು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವ

ಅ) ನಿಜವಲ್ಲ.

ಆ) ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಸರ್ವೇಯರ್ಸ್ ಹುದ್ದೆಗಳ ಭರ್ತಿ.

248 (1685) ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಗೆ ಮಂಜೂರಾಗಿರುವ ಸರ್ವೇಯರ್ ಹುದ್ದೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಆ) ಇದರ ಪೈಕಿ ಈಗ ಇರುವ ಸರ್ವೇಯರ್‌ಗಳ ಸಂಖ್ಯೆ ಎಷ್ಟು?

ಇ) ಜಿಲ್ಲೆಯಲ್ಲಿ ಎಷ್ಟು ಸರ್ವೇಯರ್‌ಗಳ ಕೊರತೆಯಿದೆ?

ಈ) ಈಗ ಕೊರತೆ ಇರುವ ಸರ್ವೇಯರ್ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?